ವಾರದ ಪತ್ರ

## ಬಿರುದು ಬಾವಲಿಗಳೇಕೆ?

ರಾಜಪ್ರಭುತ್ವ ಬೇಡವೆಂದು ನಮ್ಮ ದೇಶವನ್ನು ಆಳುತ್ತಿದ್ದ ಐನೂರು ಚಿಲ್ಲರೆ ಅರಸರ ಅಧಿಕಾರವನ್ನು ಕಸಿದುಕೊಂಡು ನಾವು ಪ್ರಜಾಪ್ರಭುತ್ವ ಪದ್ಧತಿಯನ್ನು ಅಂಗೀಕರಿಸಿದೆವು. ಪ್ರಜಾಪ್ರಭುತ್ವವೆಂದರೆ ಪ್ರಜೆಗಳಿಂದ ನಡೆಯುವ ಪ್ರಭುತ್ವ. ಇಲ್ಲಿ ಪ್ರಜೆಯೇ ಪ್ರಭು. ಆದರೆ ನಮ್ಮ ಕನ್ನಡ ಸುದ್ದಿವಾಹಿನಿಗಳಿಗೆ ರಾಜಪ್ರಭುತ್ವದ ಮೇಲೆ ತುಂಬ ಮೋಹ ಎಂದು ಕಾಣುತ್ತದೆ, ಏಕೆಂದರೆ ಈ ಸುದ್ದಿ ವಾಹಿನಿಗಳು ತಮ್ಮ ವಾರ್ತಾಪ್ರಸಾರದಲ್ಲಿ ಪ್ರಜಾಸೇವಕರಾದ ಪ್ರತಿನಿಧಿಗಳನ್ನು ಅರಸರಂತೆ ಪ್ರತಿಬಿಂಬಿಸುತ್ತವೆ. ಮುಖ್ಯಮಂತ್ರಿಯ ಕುರ್ಚಿಯನ್ನು ಸಿಂಹಾಸನವೆಂದೂ ಅವರ ಪ್ರಮಾಣ ವಚನವನ್ನು ರಾಜ್ಯಾಭಿಷೇಕವೆಂದೂ, ಮುಖ್ಯಮಂತ್ರಿಯನ್ನು ನಾಡದೊರೆಯೆಂದೂ ಇವು ತಮ್ಮ ವಾರ್ತಾ ಪ್ರಸಾರದಲ್ಲಿ ವರ್ಣಿಸುತ್ತವೆ. ನಮ್ಮ ವಾರ್ತಾ ವಾಹಿನಿಗಳಿಗೆ ಈ ಗುಲಾಮಗಿರಿ ಮನೋಭಾವವೇಕೆ?

ದೇಶದ ಪ್ರಧಾನಿಯವರು ತಮ್ಮನ್ನು ಜನಸೇವಕ, ಚೌಕಿದಾರನೆಂದು ಕರೆದುಕೊಳ್ಳುವಾಗ ನಮ್ಮ ರಾಜಕಾರಣಿಗಳನ್ನು 'ದೊರೆ' ಮುಂತಾದ ಪದಗಳಿಂದ ಹೊಗಳಿ ಅಟ್ಟಕ್ಕೇರಿಸುವುದೇಕೆ? ಅವರು ಕೂಡ ಪ್ರಜಾಸೇವಕರೇ ಅಲ್ಲವೆ?

ಇತ್ತೀಚೆಗೆ ಇನ್ನೊಂದು ಹೊಸ ಟ್ರೆಂಡ್ ಆರಂಭವಾಗಿದೆ. ನಮ್ಮ ರಾಜಕಾರಣಿಗಳಲ್ಲಿ ಒಬ್ಬೊಬ್ಬರಿಗೆ ಒಂದೊಂದು ಬಿರುದನ್ನು ಕೊಡುವುದು. ಯಡಿಯೂರಪ್ಪನವರಿಗೆ ರಾಜಾಹುಲಿಯೆಂದೂ, ಸಿದ್ಧರಾಮಯ್ಯನವರಿಗೆ ಟಗರು ಎಂದೂ ಡಿ.ಕೆ. ಶಿವಕುಮಾರರಿಗೆ ಟ್ರಬಲ್ ಶೂಟರ್ ಎಂದೂ, ಎಚ್. ವಿಶ್ವನಾಥ್‌ರವರಿಗೆ ಹಳ್ಳಿಹಕ್ಕಿಯೆಂದು ಸಂಬೋಧಿಸಲಾಗುತ್ತಿದೆ. ಈ ಪರಿಯ ಹೊಗಳಿಕೆಯೇ ರಾಜಕಾರಣಿಗಳ ಅಹಂ ಇನ್ನಷ್ಟು ಹೆಚ್ಚಿಸುತ್ತದೆ.

—ಮುರಲೀಧರ ಕುಲಕರ್ಣಿ, ಬೀದರ್

## ಹಸಿದ ಕಂಗಳು

'ಸುಬ್ಬಲಕ್ಷ್ಮಿ ಸಂಸಾರ'ದ ಗುರು ಕಣ್ಣುಗಳು ಹಸಿವಿನಿಂದ ಕೂಡಿವೆ. ಇತ್ತ ಸುಬ್ಬಲಕ್ಷ್ಮಿಯೂ ಇಲ್ಲದೆ ಅತ್ತ ಸನಿಯಳ ಸನಿಹವೂ ಇಲ್ಲದೆ ವಿರಹಾಗ್ನಿಯಿಂದ ತೊಳಲಾಡುತ್ತಿರುವರು. ಸುಬ್ಬಿಗೆ ಸಂಸಾರದ ಆಸೆಗಳೆಲ್ಲ ಸನಿಯಗಳಿಂದಾಗಿ ಕಟ್ಟೆ ಒಡೆದು ಕರಗಿ ಕಲ್ಲಿನಂತಾಗಿರುವಳು. 'ಪತಿ ಪತ್ನಿ ಔರ್ ವೋ' ಮಂದಿಗೆ ಸುಬ್ಬಲಕ್ಷ್ಮಿ ಮಾದರಿಯಾಗಿರುವಳು. ಗುರು ಗುಳ್ಳೆನರಿ ಸನಿಯಳಿಂದಾಗಿ ಕಟ್ಟೆ. ಗುಳ್ಳೆನರಿ ಸನಿಯ ಧಾರಾವಾಹಿಯ ಆಕರ್ಷಣೆ ಎಂದರೆ ತಪ್ಪಾಗಲಾರದು. ಕಾರಣ ಅವಳ ಅಭಿನಯ ಚಾತುರ್ಯ.

—ಎಸ್.ಎನ್. ಮಹಾಬಲರಾವ್, ನರಸಿಂಹರಾಜಪುರ

## ಶ್ಲಾಘನೀಯ

ಕರ್ನಾಟಕದಲ್ಲಿ ಕಂಡು ಕೇಳರಿಯದ ಮಹಾಪ್ರವಾಹ ಇಡೀ ರಾಜ್ಯವನ್ನು ತಲ್ಲಣಗೊಳಿಸಿದೆ. ಈ ಸಂದರ್ಭದಲ್ಲಿ ನಮ್ಮ ದೃಶ್ಯ ಮಾಧ್ಯಮಗಳು ವಹಿಸಿದ ಪಾತ್ರ ನಿಜಕ್ಕೂ ಅನನ್ಯ. ಪ್ರವಾಹದ ಭೀಕರತೆಯನ್ನು ನಾಡಿನ ಮೂಲೆ ಮೂಲೆಗೂ ಮುಟ್ಟಿಸಿ ಸರ್ಕಾರ ಎಚ್ಚೆತ್ತುಕೊಳ್ಳುವಂತೆ ಮಾಡಿದ ಶ್ರಮ ನಿಜಕ್ಕೂ ಅಭಿನಂದನೀಯ.

ಕೇವಲ ಸುದ್ದಿ ಪ್ರಸಾರಕ್ಕೆ ತಮ್ಮನ್ನು ಸೀಮಿತ ಮಾಡಿಕೊಳ್ಳದೇ, ಸಂತ್ರಸ್ತರ ನೆರವಿಗೆ ತಮ್ಮ ಇತಿಮಿತಿಯಲ್ಲಿ ಮುಂದಾದರು. ಜೀವನಾವಶ್ಯಕ ಪದಾರ್ಥಗಳನ್ನು ಲೋಡುಗಟ್ಟಲೆ ಸಂಗ್ರಹಿಸಿ ಅದನ್ನು ಸಮರ್ಪಕವಾಗಿ ವಿತರಣೆ ಮಾಡುವುದರ ಮೂಲಕ ಮಾನವೀಯತೆ ತೋರಿದ ಈ ಮಾಧ್ಯಮಗಳಿಗೆ ಕೃತಜ್ಞತೆಗಳು.

—ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

## ಮಾದರಿ ಕಾರ್ಯ

ಸ್ವಾತಂತ್ರ್ಯೋತ್ಸವದ ಅಂಗವಾಗಿ ಅಂಧ ಮಕ್ಕಳಿಗಾಗಿ ಚಂದನದಲ್ಲಿ 'ಥಟ್ ಅಂತ ಹೇಳಿ' ಬಹಳ ಅರ್ಥಪೂರ್ಣವಾಗಿ ಮೂಡಿ ಬಂದಿದೆ. ಅಂಧ ಮಕ್ಕಳ ಜ್ಞಾನ ವಿಕಾಸಕ್ಕೆ ಹಾಗೂ ಅವರು ಕೂಡ ಸಮಾಜದ ಮುಖ್ಯ ವಾಹಿನಿಯಲ್ಲಿ ಬರಬೇಕು. ಅವರ ಪಾಲಿಗೆ ಅಂಧತ್ವ ಶಾಪವಾಗಬಾರದು ಪ್ರಸ್ತುತ ಎಲ್ಲ ರಂಗದಲ್ಲೂ ರಾಜ್ಯದ ಅಂಧ ಮಕ್ಕಳು ತಮ್ಮಲ್ಲಿನ ಕಲೆಯನ್ನು ಅರ್ಥಪೂರ್ಣವಾಗಿ ತೆರೆದಿಟ್ಟಿದ್ದಾರೆ. ಅಂತಹ ಶುಭ ಘಳಿಗೆಯಲ್ಲಿ ನಡೆಸಿಕೊಟ್ಟದ್ದು ನಮ್ಮ ದೇಶದ ಸ್ವಾತಂತ್ರ್ಯೋತ್ಸವಕ್ಕೆ ವಿಶೇಷ ಕಳೆ ತಂದಿತ್ತು.

—ಕುಬೇರಪ್ಪ ಎಂ. ವಿಭೂತಿ, ಹರಿಹರ

## 'ಸೂಪರ್ ದಂಪತಿ' ಸುಲಭ!

ಕಲರ್ಸ್ ಸೂಪರ್ ವಾಹಿನಿಯಲ್ಲಿ 'ಸೂಪರ್ ದಂಪತಿ' ನೋಡಿ ಅವಾಕ್ಕಾದೆ! ಈ ಕಾರ್ಯಕ್ರಮ ಮೂರು ಸುತ್ತಿನಿಂದ ಕೂಡಿದೆ. ಒಂದು, ಸುತ್ತುತ್ತಾ ಬಲೂನುಗಳನ್ನು ಕಾಲಿಂದ ತುಳಿದು ಒಡೆಯುವುದು. ಎರಡನೆಯದು, ದಂಪತಿ ಸಣ್ಣ ಬಾಲನ್ನು ಇಬ್ಬರು ತುಟಿಗಳಲ್ಲಿ ಒತ್ತಿ, ಒಂದೆಡೆ ಹಾಕುವುದು ಹಾಗೂ ಬಾಟಲಿಯಲ್ಲಿರುವ ಹಗುರವಾದ ಬಾಲುಗಳನ್ನು ಬಾಯಿಂದ ಗಾಳಿ ಊದಿ ಹೊರಗೆ ತೆಗೆಯುವುದು. ಇವುಗಳನ್ನು ಯಾರು ಕಡಿಮೆ ಸಮಯದಲ್ಲಿ ಮಾಡುವರೋ ಅವರೇ 'ಸೂಪರ್ ದಂಪತಿ'ಗಳು. ಎಷ್ಟೊಂದು ಸುಲಭವಾಗಿದೆ 'ಸೂಪರ್ ದಂಪತಿ' ಎನ್ನಿಸಿಕೊಳ್ಳಲು.

ಈ ಬಗೆಯ ಆಟಗಳಿಂದ 'ಸೂಪರ್ ದಂಪತಿ' ಪಟ್ಟಕ್ಕೇರಿಬಿಡಬಹುದೇ? ಈ ಪ್ರಶ್ನೆ ನಿಜಕ್ಕೂ ಪ್ರಶ್ನೆಯಾಗಿಯೇ ಉಳಿದಿದೆ!

—ಶಂಕರೇಗೌಡ ತುಂಬಕೆರೆ, ಮಂಡ್ಯ

## 'ಡ್ಯಾನ್ಸ್' ಶೀರ್ಷಿಕೆ ಬದಲಿಸಿ

ಝೀ ಕನ್ನಡ ವಾಹಿನಿಯಲ್ಲಿ ಈ ಶೀರ್ಷಿಕೆಯ ಒಂದು ನೃತ್ಯ ಕಾರ್ಯಕ್ರಮ ಪ್ರಸಾರವಾಗುತ್ತಿದೆ. ಇಲ್ಲಿ ಎಲ್ಲವೂ ಸಮೂಹ ನೃತ್ಯವೇ ಆಗಿರುತ್ತದೆ. ಆದರೆ ಈ ನೃತ್ಯಗಳ ನಡೆಯಲ್ಲಿ ನೃತ್ಯಕ್ಕಿಂತ ಹೆಚ್ಚಾಗಿ ವಿವಿಧ ಬಗೆಯ ಕಸರತ್ತುಗಳೇ ಇರುತ್ತವೆ. ಪ್ರದರ್ಶನಗಳು ಮುಂದೆಯೂ ಇದೇ ರೀತಿ ಇದ್ದರೆ ಕೂಡಲೇ ಬದಲಾಯಿಸಿ, ಹೆಚ್ಚು ಸೂಕ್ತ ಶೀರ್ಷಿಕೆಯನ್ನು ಕೊಡಬಹುದು.

—ಶ್ರೀನಾಥ್ ಕೊನೇಟಿ

## ನಗೆಪಾಟಲು

ಝೀ ಕನ್ನಡದ 'ಗಟ್ಟಿಮೇಳ'ದಲ್ಲಿ ಅಮೂಲ್ಯಳು ತನ್ನ ಅಧಿಕಾರಿಯಾಗಿರುವ ಶಂಕರನಿಗೆ ಪದೇ ಪದೇ ಅವನನ್ನು ಶುಂಠಿ ಶಂಕರ, ಗೂಬೆ ಎಂದು ನಿಂದಿಸುತ್ತಾಳೆ. ಈಚೆಗೆ ಪ್ರಸಾರವಾದ ಕಂತಿನಲ್ಲಿ ಅವಳು ತಾನು ಕೆಲಸ ಬಿಟ್ಟು ಹೋಗುವುದಿಲ್ಲವೆಂದೂ, ತಾನು ಹೇಳಿದ ಹಾಗೇ ಶಂಕರನು ಕೇಳಬೇಕೆಂದೂ ಮೂರು ಷರತ್ತುಗಳನ್ನು ಹಾಕುವುದೂ ತೀರ ಹಾಸ್ಯಾಸ್ಪದವಾಗಿದೆ. ಆತನಿಂದ ಅಪಾರ ಸಹಾಯ ಪಡೆದೂ ಹೀಗಾಡಬಾರದು.

—ಶರ್ಮಿಷ್ಠಾ ವೇದಗರ್ಭ, ಬೆಂಗಳೂರು

## ನಗುವಿನ ಬಗ್ಗೆ ಹೇಸಿಗೆ

ಹಾಸ್ಯದ ಧಾರಾವಾಹಿಗಳಲ್ಲಿ ಕೀಳು ಅಭಿರುಚಿಯ ಸನ್ನಿವೇಶಗಳೇ ಅಧಿಕ. ನಗು ವೀಕ್ಷಕರಿಗೆ ಸಿಗಬೇಕು, ಆದರೆ ಕಾರ್ಯಕ್ರಮ ನಡೆಸಿಕೊಡುವವರೆ ಕಾರಣವೇ ಇಲ್ಲದ ಬಲವಂತದ ನಗುವಿನಿಂದ ವೀಕ್ಷಕ ಕಕ್ಕಾಬಿಕ್ಕಿ ಆಗುವ ಸಂಭವವೇ ಹೆಚ್ಚು ಎನ್ನಬಹುದು.

ಉದಾ: ಮಜಾ ಟಾಕೀಸಿನ ಇಂದ್ರಜಿತ್ ಲಂಕೇಶ್, ಮಜಾ ಭಾರತದ ಗುರುಕಿರಣ್ ಹಾಗೂ ರಚಿತಾ ರಾಮ್, ಕಾಮಿಡಿ ಕಂಪನಿಯಲ್ಲಿ ಜೆ.ಕೆ, ಅಕುಲ್ ಬಾಲಾಜಿ, ಹಾಗೂ ಖುಷಿ ತಾಪಾಂಡ ಇವರು ನಗುವುದು ನೋಡಿದರೆ ಮೈ ಉರಿಯುತ್ತದೆ ಅದರಲ್ಲೂ ಖುಷಿ ತಾ ಪಾಂಡ ಅದೇ ರೀತಿ ಕಾಣುತ್ತಾಳೆ, ಬಿಗ್‌ಬಾಸ್ ಕಾರ್ಯಕ್ರಮದಲ್ಲೇ ಅವರ ಬಗ್ಗೆ ವೀಕ್ಷಕರಿಗೆ ಗೊತ್ತಾಗಿದೆ.

ಸಂಗೀತದ ರೀತಿ ಹಾಸ್ಯ ಪ್ರಕಾರವೂ ವೀಕ್ಷಕರನ್ನು ಸಂತೋಷಪಡುವಂತೆ ಮಾಡಬೇಕು. ಕಾರ್ಯಕ್ರಮ ನಡೆಸಿಕೊಡುವವರೇ ನಕ್ಕರೆ ಹೇಗೆ? ಅವರು ನಗುವುದನ್ನು ವೀಕ್ಷಕರಿಗೆ ಕಾಣದಂತೆ ಮಾಡುವುದರಿಂದ ಕಾರ್ಯಕ್ರಮಕ್ಕೆ ನ್ಯಾಯ ಒದಗಿಸಲಿ ಎಂಬುದು ನನ್ನ ಕಳಕಳಿಯ ಮನವಿ.

—ಎನ್.ಎಸ್.ಚಂದ್ರಶೇಖರ್, ಬೆಂಗಳೂರು